**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ 3/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಮಹದೇವ ಅಮಟಿ | **ಪಿಡಬ್ಲ್ಯೂ:11** |
| ತಂದೆಯ ಹೆಸರು | : ಮಲ್ಲಿಕಾರ್ಜುನ | **ಸಿಡಬ್ಲ್ಯೂ: 12** |
| ವಯಸ್ಸು | : 41 ವರ್ಷ | |
| ಉದ್ಯೋಗ | : ಬಟ್ಟೆ ಅಂಗಡಿಯಲ್ಲಿ ಕೆಲಸ | |
| ವಾಸಸ್ಥಳ | : ಬನಹಟ್ಟಿ ಬಾಗಲಕೋಟೆ ಜಿಲ್ಲೆ | |

**ಸಾಕ್ಷಿಯನ್ನು ಈ ದಿನ ದಿಃ 23.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನನ್ನ ಸ್ವಂತ ಊರು ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ ತಾಲ್ಲೂಕು ಆಗಿರುತ್ತದೆ. ನಾನು ಐಟಿಐ ವಿಧ್ಯಾಭ್ಯಾಸ ಮಾಡಿರುತ್ತೇನೆ.

2. 2018-19 ನೇ ಸಾಲಿನಲ್ಲಿ ನಾನು ಬೆಂಗಳೂರಿನಲ್ಲಿರುವ ಮಾಲೂರು-ಹೊಸೂರು ರಸ್ತೆಯಲ್ಲಿ ಇದ್ದ ಕ್ರಿಶ್ ಆಟೋ ಪವರ್ ಪ್ರೆವೇಟ್ ಲಿಮಿಟೆಡ್ ನಲ್ಲಿ ಇಲೆಕ್ಟ್ರಿಷಿಯನ್ ಆಗಿ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ನಾನು ಲಕ್ಕೂರಿನಲ್ಲಿ ವಾಸವಿದ್ದೆನು. ಪೈಜಲ್ ಎನ್ನುವವರು ನನಗೆ ಪರಿಚಯಯಿದ್ದು ಅವರ ಹೊಸೂರನಲ್ಲಿರುವ ಕ್ರಿಶ್ ಆಟೋ ಪವರ್ ನಲ್ಲಿ ಕೆಲಸ ಮಾಡಿಕೊಂಡಿದ್ದು, ಹೊಸೂರುನಲ್ಲಿದ್ದಾಗ ಸದರಿ ಪೈಜಲ್ ನಮ್ಮ ಮನೆಯ ಪಕ್ಕದಲ್ಲಿ ವಾಸವಿದ್ದರು. ಮೂರ್ತಿ ಕೆ ಆತನ ಪರಿಚಯ ಇರುತ್ತದೆ. ಆತನದು ಯುಟಿಯೋ ಕಾರ್ ಇದ್ದು ಆತ ಬಾಡಿಗೆಗೆ ಓಡಿಸುತ್ತಾನೆ. ಮೂರ್ತಿ ಪರಿಚಯ ನನಗೆ

ಫೈಜಲ್ ಮುಖಾಂತರ ಆಗಿರುತ್ತದೆ. ತೌಸಿಫ್ ಉಲ್ಲಾ 5 ನೇ ಆರೋಪಿಯ ಪರಿಚಯ ಇರುತ್ತದೆ. ಮಾಲೂರಿನಲ್ಲಿ ನಮ್ಮ ಕ್ರಿಶ್ ಆಟೋ ಪವರ್ ಕಂಪನಿಯ ಶಾಖೆಯಲ್ಲಿದ್ದಾಗ ಕಂಪನಿಯಲ್ಲಿ ಗಣೇಶನ ದೇವಸ್ಥಾನಕ್ಕೆ ಗ್ರಾನೈಟ್ ನೋಡಲು ಮಾಲೂರಿನಲ್ಲಿ ಗ್ರಾನೈಟ್ ಅಂಗಡಿಗೆ ಹೋದಾಗ ಅಲ್ಲಿ ನನಗೆ ತೌಸಿಫ್ ಉಲ್ಲಾ ಪರಿಚಯವಾಗಿರುತ್ತದೆ. ಆತ ನನಗೆ ಪರಿಚಯವಾಗಿ ಆತನ ಜೊತೆ ಮಾತನಾಡುತ್ತಿದ್ದೆನು. ಕೋರೋನಾ ಕಾಲದಲ್ಲಿ ನನಗೆ ಹಣಕಾಸಿನ ತೊಂದರೆಯಾದ್ದಾಗ ನಾನು ತೌಸಿಫ್ ಉಲ್ಲಾಗೆ ಕೈ ಸಾಲ ನೀಡುವಂತೆ 20,000/- ಕೇಳಿರುತ್ತೇನೆ. ಆತ ನನಗೆ ಹಣ ಕೊಡುತ್ತೇನೆ ಎಂದು ಹೇಳಿದ್ದನು ಆದರೆ ಹಣ ಕೊಡಲಿಲ್ಲ.

3. 2021 ರಲ್ಲಿ ನಾನು ಒಂದು ದಿನ ಲಕ್ಕೂರು ಬಸ್ ಸ್ಟ್ಯಾಂಡ್ ಬಳಿ ನಿಂತಿದ್ದಾಗ ತೌಸಿಫ್ ನನಗೆ ಫೋನ್ ಕರೆ ಮಾಡಿ ಆತನ ಒಬ್ಬ ಸ್ನೇಹಿತ್ ನಿದ್ದು ಆತನನ್ನು ಕರೆದುಕೊಂಡು ಮೈಸೂರಿಗೆ ಹೋಗಿ ಅಲ್ಲಿ ಆತನ ಕೆಲಸ ಮುಗಿದ ನಂತರ ವಾಪಸ್ ಬೆಂಗಳೂರಿಗೆ ಕರೆದುಕೊಂಡು ಬರಬೇಕು ಅದಕ್ಕಾಗಿ ಒಂದು ಬಾಡಿಗೆ ವಾಹನವನ್ನು ನೋಡುವಂತೆ ಮತ್ತು ಅವರನ್ನು ಕರೆದುಕೊಂಡು ಹೋಗಿ ಬರುವಂತೆ ತಿಳಿಸಿದ್ದನು. ಆಗ ನಾನು ಮೂರ್ತಿಗೆ ಫೋನ್ ಮಾಡಿದ್ದೆನು. ಆಗ ಮೂರ್ತಿ ಬಾಡಿಗೆಗೆ ಬರುತ್ತೇನೆ, 10,000/- ಬಾಡಿಗೆ ಹೇಳುವಂತೆ ತಿಳಿಸಿದ್ದನು. ನಂತರ ನಾನು ತೌಸಿಫ್ ಗೆ ಫೋನ್ ಮಾಡಿ ಬಾಡಿಗೆಗೆ ಕಾರ ಬರುತ್ತದೆ, ಚಾಲಕ 10 ಸಾವಿರ ಬಾಡಿಗೆ ಹೇಳುತ್ತಿದ್ದಾನೆ ಎಂದು ತಿಳಿಸಿದ್ದೆನು, ಆಗ ತೌಸಿಫ್ 10 ಸಾವಿರ ರೂಪಾಯಿ ಬೇಡಾ 8 ಸಾವಿರ ಮಾತನಾಡುವಂತೆ ನನಗೆ ತಿಳಿಸಿದ್ದನು. ನಾನು ನಂತರ ಮೂರ್ತಿಗೆ 8 ಸಾವಿರ ಗೆ ಮಾತನಾಡಿ ಬಾಡಿಗೆಗೆ ಒಪ್ಪಿಸಿರುತ್ತೇನೆ.

**4.** ನಂತರ ಮೂರ್ತಿ ಸಂಜೆ ಸುಮಾರು **5.00** ಗಂಟೆಗೆ ಲಕ್ಕೂರಿಗೆ ಬಂದನು. ನಾನು ಕೂಡಾ ಆತನ ಜೊತೆ ಬರುತ್ತೇನೆಂದು ಹೇಳಿದ್ದೆನು. ನಂತರ ಇಬ್ಬರು ಸೇರಿ ಬೆಂಗಳೂರಿನ ಮೆಜೆಸ್ಟಿಕ್ ಗೆ ಹೋದೆವು. ಆಗ ಸಮಯ ಸುಮಾರು **8.30** ಆಗಿತ್ತು. ಅಲ್ಲಿ ಹೋಗಿ ಸದರಿ ವ್ಯಕ್ತಿಯ ಪರಿಚಯವಿಲ್ಲದ ಕಾರಣ ತೌಸಿಪ್ ಗೆ ಪೋನ್ ಕರೆ ಮಾಡಿ ಕಾನ್ಪರೆನ್ಸ ಕಾಲ್ ಹಾಕಿಕೊಂಡು ಮಾತನಾಡಿದ್ದೆವು. ನಂತರ ನಮ್ಮ ಪರಿಚಯವನ್ನು ತಿಳಿಸಿದ ಮೇಲೆ ನಮ್ಮ ಬಳಿ ಒಬ್ಬ ವ್ಯಕ್ತಿ ಬಂದನು. ಅವನ ಹೆಸರು ಜಹಾಂಗಿರ್ ಎಂದು ತಿಳಿಸಿದ್ದನು. ನಂತರ ಆತನನ್ನು ಕರೆದುಕೊಂಡು ಮೈಸೂರಿಗೆ ಬಂದೆವು. ಆಗ ಸಮಯ **1.00** ಗಂಟೆ ಆಗಿತ್ತು. ರಾತ್ರಿಯಾದ್ದರಿಂದ ಜಹಾಂಗಿರ್ ಯಾವುದಾದರೂ ಲಾಡ್ಜನಲ್ಲಿ ರೂಮ್ ಮಾಡುವಂತೆ ಕೇಳಿಕೊಂಡನು. ನಂತರ ಮೈಸೂರಿನಲ್ಲಿರುವ ನೀಲಗಿರಿಸ್ ಹೋಟೆಲ್ ಗೆ ಹೋದೆವು, ಆಗ ಜಹಾಂಗಿರ್ ನೀವೆ ಮಾತನಾಡಿ ಎಂದು ತಿಳಿಸಿದ್ದನು, ನಂತರ ನಾನು ಮತ್ತು ಮೂರ್ತಿ ಹೋಟೆಲ್ ನಲ್ಲಿ ಎರಡು ರೂಮ್ ಬುಕ್ ಮಾಡಿದ್ದೆವು. ಸದರಿ ಎರಡು ರೂಮ್ ಗಳನ್ನು ನನ್ನ ಹೆಸರಿನಲ್ಲಿ ಬುಕ್ ಮಾಡಲಾಯಿತು. ಸದರಿ ರೂಮಿಗೆ ಜಹಾಂಗೀರ್ ಅನಲೈನ್ ಮೂಲಕ ಹಣ ಸಂದಾಯ ಮಾಡಿದರು. ನಂತರ ಒಂದು ರೂಮ್ ನಲ್ಲಿ ಆತ ಉಳಿದುಕೊಂಡು ಇನ್ನೊಂದು ರೂಮ್ ನಲ್ಲಿ ನಾನು ಮತ್ತು ಮೂರ್ತಿ ಉಳಿದುಕೊಂಡೆವು. ನಂತರ ಒಂದು **15-20** ನಿಮಿಷಗಳ ಬಳಿಕ ಜಹಾಂಗೀರ್ ನಮ್ಮ ಬಳಿ ಬಂದು ಆತನ ಸ್ನೇಹಿತರು ಬಂದಿರುತ್ತಾರೆ ಅವರನ್ನು ಕರೆದುಕೊಂಡು ಬರೋಣ ಬನ್ನಿ ಎಂದು ಮೂರ್ತಿ ಯನ್ನು ಕರೆದರು, ಆಗ ಮೂರ್ತಿಗೆ ಸುಸ್ತಾದ್ದರಿಂದ ನಾನೇ ಮೂರ್ತಿಯ ಕಾರನ್ನು ತೆಗೆದುಕೊಂಡು ನಾನು ಮತ್ತು ಜಹಾಂಗೀರ್ ಹೊರಟೆವು, ಆತ ಗೂಗಲ್ ಮ್ಯಾಪ್ ಹಾಕಿಕೊಂಡು ಆತನ ಸ್ನೇಹಿತರು ಇದ್ದ ಸ್ಥಳಕ್ಕೆ ಹೋದೆವು. ಅಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು.

ಅವರನ್ನು ಕಾರಿನಲ್ಲಿ ಕರೆದುಕೊಂಡು ವಾಪಸ್ ಹೋಟೆಲ್ ಗೆ ಬಂದಿರುತ್ತೇವೆ. ಅವರು ಜಹಾಂಗೀರ್ ಕೊಣೆಯಲ್ಲಿ ಉಳಿದುಕೊಂಡರು.

5. ಮಾರನೇ ದಿನ ಬೆಳಿಗ್ಗೆ ಸುಮಾರು 8–8.30 ಗೆ ಜಹಾಂಗೀರ್ ನಮ್ಮ ಕೊಣೆಗೆ ಬಂದು ಏನೋ ಕೆಲಸವಿದೆ ಮುಗಿಸಿಕೊಂಡು ಬರುತ್ತೇವೆ ಎಂದು ಮೂರ್ತಿಯ ಕಾರನ್ನು ಕೇಳಿದನು, ಆಗ ಬರುತ್ತೇನೆ ಎಂದು ಹೇಳಿದಾಗ ಜಹಾಂಗೀರ್ ನಾವಷ್ಟೇ ಹೋಗಿ ಬರುತ್ತೇವೆ, ನೀವು ಕೊಣೆಯಲ್ಲಿರಿ ಎಂದು ಹೇಳಿದನು, ಆಗ ಮೂರ್ತಿ ಕಾರನ್ನು ನೀಡಿರುವುದಿಲ್ಲ. ನಂತರ ಜಹಾಂಗೀರ್ ತೌಪಿಪ್ ಗೆ ಪೋನ್ ಮಾಡಿ ತೌಸಿಪ ನನಗೆ ಪೋನ್ ಮಾಡಿ ಕಾರನ್ನು ಕೊಡುವಂತೆ ಕಾರಿಗೆ ಏನಾದರೂ ಆದರೇ ನೋಡಿಕೊಳ್ಳುತ್ತೇನೆ ಎಂದು ತಿಳಿಸಿದ್ದನು. ನಂತರ ನಾನು ಮೂರ್ತಿಗೆ ಕಾರ ನೀಡುವಂತೆ ಹೇಳಿರುತ್ತೇನೆ. ಮೂರ್ತಿ ಕಾರಿನ ಕೀ ಅನ್ನು ಜಹಾಂಗೀರ್ ನೀಡಿರುತ್ತಾನೆ. ಸದರಿ ಕಾರಿನಲ್ಲಿ ಜಹಾಂಗೀರ್ ನ ಕೊಣೆಯಲ್ಲಿದ್ದ ಎಲ್ಲರೂ ಹೋಗಿರುತ್ತಾರೆ. ಸುಮಾರು 2 ಗಂಟೆಯ ಬಳಿಕ ಅವರು ವಾಪಸ್ ಬಂದು ಬೆಂಗಳೂರಿಗೆ ವಾಪಸ್ ಹೋಗೋಣ ಬನ್ನಿ ಎಂದು ನಮ್ಮನ್ನು ಕೇಳಿದರು. ನಂತರ ಎಲ್ಲರೂ ಸೇರಿ ವಾಪಸ್ ಬೆಂಗಳೂರಿಗೆ ಬಂದು ಅಲ್ಲಿ ಮೆಜಿಸ್ಟಿಕ್ ನಲ್ಲಿ ಜಹಾಂಗೀರ್ ಮತ್ತು ಆತನ ಸ್ನೇಹಿತರನ್ನು ಇಳಿಸಿ ನಾನು ಮತ್ತು ಮೂರ್ತಿ ಲಕ್ಕೂರಿಗೆ ವಾಪಸ್ ಬಂದಿರುತ್ತೇವೆ. ನನ್ನನ್ನು ಲಕ್ಕೂರಿನಲ್ಲಿ ಇಳಿಸಿ ಮೂರ್ತಿ ತನ್ನ ಊರಿಗೆ ವಾಪಸ್ ಹೋಗಿರುತ್ತಾನೆ. ಇನ್ನಿಬ್ಬರ ಹೆಸರು ನನಗೆ ನೆನಪಿರುವುದಿಲ್ಲ.

6. ನಂತರ 1 ತಿಂಗಳ ಬಳಿಕ ಒಂದು ದಿನ ಪೊಲೀಸರು ನನಗೆ ಪೋನ್ ಕರೆ ಮಾಡಿ ವಾಹನದ ಬಗ್ಗೆ ಕೇಳಿದರು, ಆಗ ನಾನು ವಾಹನದ ನಂಬರ ನನಗೆ ತಿಳಿದಿರುವುದಿಲ್ಲ ಎಂದು ಹೇಳಿದೆನು. ಆಗ ಮೈಸೂರಿಗೆ ಬಂದು ಹೋದ ಬಗ್ಗೆ ಕೇಳಿದಾಗ ಹೌದು ಎಂದು

ಹೇಳಿರುತ್ತೇನೆ. ನಂತರ ಪೊಲೀಸರು ನನ್ನನ್ನು ಅತ್ತಿಬೆಲೆ ಯಲ್ಲಿ ಭೇಟಿಯಾಗುವಂತೆ ತಿಳಿಸಿದಾಗ ನಾನು ಅಲ್ಲಿಗೆ ಹೋಗಿರುತ್ತೇನೆ, ಪೊಲೀಸರು ನನ್ನನ್ನು ಅಲ್ಲಿ ವಿಚಾರಣೆ ಮಾಡಿ ವಿಡಿಯೋಗಳನ್ನು ತೋರಿಸಿ ಸದರಿ ಆಸಾಮಿಗಳ ಜೊತೆಗೆ ಮೈಸೂರಿಗೆ ಬಂದ ಬಗ್ಗೆ ವಿಚಾರಿಸಿದ್ದು ನಾನು ಅವರಿಗೆ ನಡೆದ ವಿಚಾರವನ್ನು ಹೇಳಿರುತ್ತೇನೆ. ಪೊಲೀಸರು ಸದರಿ ಆಸಾಮಿಗಳು ಮೈಸೂರಿನಲ್ಲಿ ಚಿನ್ನದ ಅಂಗಡಿಯನ್ನು ಕಳ್ಳತನ ಮಾಡಿ ಕೊಲೆ ಮಾಡಿರುತ್ತಾರೆ ಎಂದು ವಿಷಯವನ್ನು ತಿಳಿಸಿದರು. ನಂತರ ನನಗೆ ಅವರು ಮೈಸೂರಿನ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಗೆ ಬರುವಂತೆ ತಿಳಿಸಿದ್ದು ನಾನು ಅವರ ಜೊತೆಗೆ ಠಾಣೆಗೆ ಬಂದು ಎಲ್ಲಾ ವಿವರವನ್ನು ತಿಳಿಸಿದಾಗ ಅವರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ.

**7.** ನಂತರ **1** ತಿಂಗಳ ಬಳಿಕ ಮತ್ತೇ ನನ್ನನ್ನು ಕರೆಸಿದರು, ಆಗ ನಾನು ಮತ್ತು ಮೂರ್ತಿ ಮೈಸೂರಿನ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಗೆ ಬಂದಿರುತ್ತೇವೆ, ಆಗ ಪೋಟೋಗಳನ್ನು ತೋರಿಸಿ ವ್ಯಕ್ತಿಗಳನ್ನು ಗುರುತಿಸಲು ಕೇಳಿದಾಗ ನಾನು ಮತ್ತು ಮೂರ್ತಿ ಗುರುತಿಸಿರುತ್ತೇವೆ. ನಾನು ಪೋಟೋವನ್ನು ನೋಡಿ ತೌಸಿಪ್ ಜಹಾಂಗೀರ್ ಮತ್ತು ಇನ್ನಿಬ್ಬರು ಆಸಾಮಿಗಳನ್ನು ಗುರುತಿಸಿರುತ್ತೇನೆ. ನಂತರ ನನ್ನ ಮುಂದುವರೆದ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಇರುವ **2** ಮತ್ತು **3** ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ದಾಖಲೆಯನ್ನು ತೋರಿಸಿ ಗುರುತಿಸಲು ಕೇಳಿದಾಗ ಸಾಕ್ಷಿಯು ಹೋಟೆಲ್ ನೀಲಗಿರಿಸ್ ರಿಜಿಸ್ಟರನ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–**52** ಎಂದು ಗುರುತಿಸಲಾಯಿತು. ಸದರಿ ರಿಜಿಸ್ಟರ್ ನಲ್ಲಿ ನಮೂದು ಮಾಡಿದ ವಿಳಾಸ ಮತ್ತು ಫೋನ್ ನಂಬರ್ ನನ್ನದೇ ಆಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸ ಇ ಎ ಒ**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**

(ಕನ್ನಡದಲ್ಲಿಯ ಸಾಕ್ಷ್ಯವನ್ನು ಹಿಂದಿ ಭಾಷೆಗೆ ತರ್ಜುಮೆ ಮಾಡಿ ಆರೋಪಿಗಳಿಗೆ ಹೇಳಲಾಗಿರುತ್ತದೆ)

**III ADJ**, **Mysuru**.